ನಮ್ಮ ಮನೆ ಯೋಜನೆ ಜಾರಿ ಕುರಿತು

143 (395) ಶ್ರೀ ಸಿದ್ದು ಸವದಿ (ತೇರದಾಳ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಮ್ಮ ಮನೆ ಯೋಜನೆ ಜಾರಿ ಆಗಿದೆಯೇ; (ವಿವರ ನೀಡುವುದು)

ಆ) ಈ ಯೋಜನೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಆಯಾ ಬ್ಯಾಂಕುಗಳಿಗೆ ಕಳುಹಿಸಿದ್ದರೂ ಯಾವ ಬ್ಯಾಂಕು ಮಂಜೂರಾತಿ ಕೊಡಲು ಸಿದ್ಧವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ರೀತಿ ಈ ಯೋಜನೆಯಡಿಯಲ್ಲಿ ಮನೆಗಳನ್ನು ಕಟ್ಟಲಾಗುವುದು?

ಶ್ರೀ ವಿ. ಸೋಮಣ್ಣ (ವಸತಿ ಸಚಿವರು):

ಅ) ಹೌದು.

ನಗರ ಬಡ ಜನರಿಗೆ ಅವರ ನಿವೇಶನದಲ್ಲಿ ಮನೆ ನಿರ್ಮಿಸಿಕೊಳ್ಳಲು ಅಥವಾ ಮನೆ ಖರೀದಿಸಲು ಸಾಲ ಸೌಲಭ್ಯ ಹಾಗೂ ಒಂದು ಲಕ್ಷ ರೂ.ಗಳ ಸಾಲಕ್ಕೆ ಶೇಕಡ 5ರಂತೆ ಬಡ್ಡಿ ಸಹಾಯಧನ ನೀಡುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ. ಸರ್ಕಾರವು ರಾಜ್ಯದಲ್ಲಿ ಈಗಾಗಲೇ ಜಾರಿಯಲ್ಲಿರುವ ವಾಜಪೇಯಿ ನಗರ ವಸತಿ ಯೋಜನೆ ಮತ್ತು ನಮ್ಮ ಮನೆ (ISHUP) ಯೋಜನೆಗಳನ್ನು ಒಟ್ಟುಗೂಡಿಸಿ ಸೌಲಭ್ಯವನ್ನು ನೀಡಲು ತೀರ್ಮಾನಿಸಿದೆ. ಸದರಿ ಯೋಜನೆಯಡಿಯಲ್ಲಿ ಒಬ್ಬ ಫಲಾನುಭವಿ ರೂ. 1,30,000/– ಬೆಲೆಯ ಮನೆಯನ್ನು ಸುಲಭವಾಗಿ ನಿರ್ಮಿಸಿಕೊಳ್ಳಲು ಸಹಕಾರಿಯಾಗಿರುತ್ತದೆ. ವಿವರಗಳು ಕೆಳಗಿನಂತೆ ಇರುತ್ತವೆ.

1.	ನಮ್ಮ ಮನೆ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ ಬ್ಯಾಂಕ್ ಸಾಲ	ರೂ. 50,000.00
2.	ವಾಜಪೇಯಿ ನಗರ ವಸತಿ ಯೋಜನೆಯಡಿ ಸಹಾಯಧನ	ರೂ. 50,000.00
3.	ಫಲಾನುಭವಿಗಳ ವಂತಿಕೆ	ರೂ. 30,000.00
	ಒಟ್ಟು	ರೂ. 1,30,000.00

ಆ) ಹೌದು. ಕೆಲವು ಬ್ಯಾಂಕುಗಳು ಪ್ರಾರಂಭದಲ್ಲಿ ಮಂಜೂರಾತಿ ನೀಡಲು ಸಿದ್ಧರಿರಲಿಲ್ಲ.

ಇ) ಬಹುತೇಕ ಫಲಾನುಭವಿಗಳು ಬಡತನರೇಖೆಗಿಂತ ಕೆಳಗಿನವರಾಗಿದ್ದು ಅವರ ವಾರ್ಷಿಕ ಆದಾಯವು ರೂ. 17,800/–ಗಿಂತ ಕಡಿಮೆ ಇರುತ್ತದೆ. ಈ ಕಾರಣ ಸಾಲ ಮರುಪಾವತಿ ಸಾಮರ್ಥ್ಯ ಕಡಿಮೆ ಇದ್ದುದ್ದರಿಂದ ಹಾಗೂ ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿಗಳನ್ವಯ ಬ್ಯಾಂಕುಗಳು ರೂ. 25,000/–ಕ್ಕಿಂತ ಹೆಚ್ಚಿನ ಸಾಲವನ್ನು ಕೊಡಲು ಒಪ್ಪುತ್ತಿರಲಿಲ್ಲ. ಈ ಎಲ್ಲಾ ನ್ಯೂನತೆಗಳನ್ನು ಗಮನದಲ್ಲಿ ಇಟ್ಟುಕೊಂಡು ಬ್ಯಾಂಕಿನವರೊಂದಿಗೆ ಮತ್ತು ಸರ್ಕಾರದ ಅಧಿಕಾರಿಗಳೊಂದಿಗೆ ಅನೇಕ ಸಭೆಗಳನ್ನು ನಡೆಸಲಾಯಿತು. ಈಗ ಒಟ್ಟು ರೂ. 50,000/–ವರೆಗೆ ಸಾಲವನ್ನು ಬಿ.ಪಿ.ಎಲ್. ಕುಟುಂಬಗಳಿಗೆ ನೀಡಲು ಬ್ಯಾಂಕ್‌ನವರು ಒಪ್ಪಿರುತ್ತಾರೆ. ಫಲಾನುಭವಿಯು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳಿಗೆ ಸೇರಿದಲ್ಲಿ, ಫಲಾನುಭವಿಯ ವಂತಿಕೆ ರೂ. 20,000/–ಗಳನ್ನು ಶೇ. 22.75% ಯೋಜನೆಯಡಿ ಹಾಗೂ ಆರ್ಥಿಕವಾಗಿ ಹಿಂದುಳಿದ ನಗರದ ಇತರ ಬಡ ಜನರಿಗೆ ಫಲಾನುಭವಿ ವಂತಿಕೆ ರೂ. 20,000/–ಗಳನ್ನು ಶೇ. 7.25% ಯೋಜನೆಯಡಿ ಭರಿಸಲು ಅವಕಾಶ ಕಲ್ಪಿಸಲಾಗಿದೆ.

ಫಲಾನುಭವಿಗಳು ರೂ. 10,000/–ಗಳನ್ನು ಮಾತ್ರ ಸ್ವಂತ ಮೂಲಗಳಿಂದ ಭರಿಸಬೇಕಾಗುತ್ತದೆ.

ಪ್ರೇಕ್ಷಣೀಯ ಸ್ಥಳಗಳ ಮೂಲಭೂತ ಸೌಲಭ್ಯಗಳಿಗೆ ಅನುದಾನ ಒದಗಿಸುವುದು

144 (396) ಶ್ರೀ ಸಿದ್ದು ಸವದಿ (ತೇರದಾಳ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತೇರದಾಳ ಮತಕ್ಷೇತ್ರದ ಐತಿಹಾಸಿಕ ಸ್ಥಳಗಳಾದ ಕಲ್ಲಳ್ಳಿ ವೆಂಕಟರಮಣ ದೇವಸ್ಥಾನ, ಮಹಾಲಿಂಗಪುರದ ಬನಶಂಕರಿ ದೇವಸ್ಥಾನ ಮತ್ತು ಬನಹಟ್ಟಿ ಶ್ರೀ ಕಾಡಸಿದ್ದೇಶ್ವರ ದೇವಸ್ಥಾನಗಳಲ್ಲಿ ಪ್ರವಾಸಿಗರ ಅನುಕೂಲಕ್ಕೆ ಮೂಲಭೂತ ಸೌಲಭ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕೊರತೆಯನ್ನು ನಿವಾರಿಸಲು ಯಾವಾಗ ಅನುದಾನ ಒದಗಿಸಲಾಗುವುದು?

ಶ್ರೀ ಜಿ. ಜನಾರ್ದನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ಹೌದು.